ಮೂಡಿಗೆರೆ ಟೌನ್ ಹತ್ತಿರ ಕೆ. ಎಂ. ರೋಡಿನಿಂದ ಒಂದು ರಸ್ತೆ ನಿರ್ಮಾಣ ಮಾಡುವುದು

60. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ :—

ಮೂಡಿಗೆರೆ ಟೌನ್ ಹತ್ತಿರ ಕೆ. ಎಂ. ರೋಡಿನಿಂದ ಮೂಡಿಗೆರೆ ಕಾನ್‌ವೆಂಟ್ ಸ್ಕೂಲ್ ಹಿಂಭಾಗದಿಂದ ಹೆಸಗಲ್ ಹಳ್ಳದಿಂದ ಹಸಗಲ್ ಹರಿಜನ ಕೇರಿ ಮಾರ್ಗವಾಗಿ ಕೊಡಗಿ ಬೈರ್ ಮುಖೇನ ಚಿಕ್ಕಳ್ಳಿ, ಹಾರಲ ಗದ್ದೆ, ಕಾರಹಟ್ಟಿ ಮತ್ತು ನತ್ತಿಹಳ್ಳಿ ಮಾರ್ಗವಾಗಿ ಗುಲ್ಲನ ಪೇಟೆಗೆ ಒಂದು ರಸ್ತೆಯನ್ನು ಮಾಡಲು ಸರ್ಕಾರದವರು ಅಂದಾಜು ತಯಾರು ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

ಇಲ್ಲ.

ಚಿಕ್ಕಮಗಳೂರು ತಾಲ್ಲೂಕು ವಳಗೇರಹಳ್ಳಿ ಹಲಸುಮನೆ ತಾಲ್ಲೂಕ್ ಅಭಿವೃದ್ಧಿ ರಸ್ತೆಯ ಕಾಮಗಾರಿ

61. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ: —

(ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿಯ ವಳಗೇರಹಳ್ಳಿ—ಹಲಸುಮನೆ ತಾಲ್ಲೂಕ್ ಅಭಿವೃದ್ಧಿ ರಸ್ತೆಯನ್ನು ಕಾಮಗಾರಿ ಇಲಾಖೆಗೆ ವಹಿಸಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ;

(ಆ) ಹಾಗಿದ್ದರೆ, ಈ ವಿಷಯ ಈಗ ಯಾವ ಹಂತದಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

(ಅ) ಇಲ್ಲ.

(ಆ) ಮೇಲ್ಕಂಡ ಉತ್ತರದಿಂದಾಗಿ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಹಳೇಮೂಡಿಗೆರೆ ಹತ್ತಿರ ಒಂದು ಸೇತುವೆ ಮತ್ತು ಒಂದು ರಸ್ತೆ ನಿರ್ಮಿಸುವುದು

63. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಮೂಡಿಗೆರೆ ತಾಲ್ಲೂಕು ಹಳೇಮೂಡಿಗೆರೆ ಹರಿಜನ ಕಾಲೋನಿ, ಹೊರಟ್ಟಿ ಹಳೇ ಮೂಡಿಗೆರೆ ಶ್ರೀ ಬೋಳಣ್ಣಗೌಡ್ರು ಮತ್ತು ಸಿದ್ದೇಗೌಡ್ರು ಗದ್ದೆ ಹತ್ತಿರದಲ್ಲಿರುವ ಹೊಳೆಗೆ ಅಡ್ಡಲಾಗಿ ಒಂದು ಸೇತುವೆ ಕಟ್ಟಿಸಿದರೆ ಮತ್ತು ಹಳೇ ಮೂಡಿಗೆರೆ ಗ್ರಾಮದ ಮೇಲೆ ಕೆ. ಎಂ. ರೋಡಿಗೆ ಸೇರಿಸುವಂತೆ ಒಂದು ರಸ್ತೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗಿ ಅತ್ಯಲ್ಪ ಕಾಲದಲ್ಲಿ ರೈತರು ವ್ಯವಸಾಯ ಸಾಮಾನುಗಳನ್ನು ಸಾಗಿಸಲು ಅನುಕೂಲವಾಗುತ್ತದೆಂಬುದು ಸರಕಾರ ಪರಿಶೀಲಿಸಿದೆಯೇ ;

(ಆ) ಹಾಗಿದ್ದರೆ ಈ ಸೇತುವೆ ಮತ್ತು ರಸ್ತೆಯ ಬಗ್ಗೆ ನಕ್ಷೆ ಮತ್ತು ಅಂದಾಜುಗಳು ತಯಾರಿಸಲ್ಪಟ್ಟಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

(ಅ) ಇಲ್ಲ. ಈ ರಸ್ತೆ ಪಿ. ಡಬ್ಲ್ಯೂ. ಡಿ. ಇಲಾಖೆಗೆ ಒಳಪಟ್ಟಿಲ್ಲ.

(ಆ) ಮೇಲೆ ನೀಡಿದ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

Saguvali Chits

67. **Sri G. PUTTASWAMY** (Mudigere).—

Will the Minister for Revenue be pleased to state:—

(*a*) the number of House-site Darkhast cases pending in Chick magalur District (talukwise) ;

(*b*) whether it has come to the notice of the Government that most of the cases are pending issue of saguvali chits as the applicants have failed to pay the upset price and phodi fees ;

(*c*) whether it has come to the Notice of the Government that the members of the Scheduled Castes and Tribes and also other houseless people find it very difficult to pay the upset price and Phodi fees for obtaining House sites ;

(*d*) if so, whether there is any proposal to amend the Land Grant rules so as to empower the Tahsildars to grant house sites to the members of Scheduled Castes and Tribes and also to other houseless poor people by waiving the upset price and phodi fees upto Rs. 100 in each case ?

Sri N. HUTCHAMASTHY GOWDA (Minister for Revenue).—

(*a*)

	Taluk	*Cases pending*
1.	Chikmagalur	118
2.	Mudigere	406
3.	Koppa	209
4.	N. R. Pura	302
5.	Sringeri	419
6.	Kadur	29
7.	Tarikere	37

(*b*) No.

(*c*) and (*d*) Under Rule 18 (3) of the Mysore Land Grant Rules, 1969, the Deputy Commissioner can grant building sites, free of cost to the members of the Scheduled Castes and Tribes in deserving cases.

Under Rule 137 of the Mysore Land Revenue Rules 1966 members of Scheduled Castes and Scheduled Tribes are exempted from payment of Phodi fees.